ಅದಕ್ಕೆ ಸಂಪೂರ್ಣವಾದಂತಹ ಸಹಾಯವನ್ನು ಮಾಡುವುದಕ್ಕೆ ಸರ್ಕಾರ ತಯಾರಿದೆ. ಎನ್ನುವ ಮಾತನ್ನು ಹೇಳುತ್ತಾ. ಇನ್ನು ರಸ್ತೆ ಮಾಡುವಂತಹ ವಿಚಾರದಲ್ಲಿಯೂ ಕೂಡ ನಾವು ಪ್ರವಾಹ ಪರಿಹಾರ ನಿಧಿಯಡಿಯಲ್ಲಿ ಕೆಲವು ಹಣವನ್ನು ಕೊಡುತ್ತೇವೆ. ಇನ್ನು ಗ್ರಾಮೀಣಾಭಿವೃದ್ಧಿ ಇಲಾಖೆಯವರು ಕೂಡ ಇದರಲ್ಲಿ ಕ್ರಮ ಕೈಗೊಳ್ಳುತ್ತಾರೆ ಎಂದು ಹೇಳಿ ಸದನದ ಮೂಲಕ ನಮಗೆ ವಿನಂತಿಯನ್ನು ಮಾಡುತ್ತೇನೆ.

ಅಧ್ಯಕ್ಷರು: ಈಗ ಎಂ.ಟಿ. ಕೃಷ್ಣಪ್ಪ, ದಯಮಾಡಿ ಕುಳಿತುಕೊಳ್ಳಿ ಇದು ಶೂನ್ಯವೇಳೆ, ಕೆ. ರಘುಪತಿ ಭಟ್, ಎಸ್.ಎಲ್. ಧರ್ಮೇಗೌಡ, ಕೆ.ಎಸ್. ಈಶ್ವರಪ್ಪ, ಗೋಪಾಲಕೃಷ್ಣ ಬೇಳೂರು ಎಲ್ಲ ಕೊಟ್ಟಿದ್ದಾರೆ ಯಾರೂ ಇಲ್ಲ. ರಾಜೇಂದ್ರನ್ ನೀವು ಜೀರೋ ಅವರ್‌ನಲ್ಲಿ ಕೇಳುತ್ತೇನೆಂದು ಹೇಳಿದ್ದೀರಲ್ಲ.

ಶ್ರೀ ಎಸ್. ರಾಜೇಂದ್ರನ್: ಮಾನ್ಯ ಅಧ್ಯಕ್ಷರೆ, ನಾನು ಬಹಳ ಮುಖ್ಯವಾಗಿ ಕುಡಿಯುವ ನೀರಿನ ಬಗ್ಗೆ ಕಾಲಿಂಗ್ ಅಟೆನ್‌ಷನ್ ಹಾಕಿದ್ದೆ...

ಅಧ್ಯಕ್ಷರು: ಈಗ ನೀವು ಕೇಳಿರುವುದು ಅನಧಿಕೃತವಾಗಿ ಕಾಂಪೌಂಡ್ ಹಾಕಿದ್ದಾರೆ, ಬೋರ್‌ವೆಲ್ ಹಾಕಿಬಿಟ್ಟಿದ್ದಾರೆ ಎಂದು

ಶ್ರೀ ಎಸ್. ರಾಜೇಂದ್ರನ್: ಮಾನ್ಯ ಅಧ್ಯಕ್ಷರೆ, ಮುನ್ಸಿಪಾಲಿಟಿ ಮಂತ್ರಿಗಳು ಇಲ್ಲ. ಬಂದ ಮೇಲೆ ಮಾತನಾಡುತ್ತೇನೆ.

ಅಧ್ಯಕ್ಷರು: ದಯಮಾಡಿ ಕೇಳಿ, ಜೀರೋ ಅವರ್‌ನಲ್ಲಿ ಕಳುಹಿಸುತ್ತೀರಿ. ಅದಕ್ಕೆ ಡಿಪಾರ್ಟ್‌ಮೆಂಟ್‌ನ ಮಂತ್ರಿಗಳು ಬರಬೇಕು ಎಂದಿಲ್ಲ. ಸರ್ಕಾರದ ಪರವಾಗಿ ಉತ್ತರ ಹೇಳುತ್ತಾರೆ. ಅದು ಬಿಟ್ಟು ಈಗ ನೀವು ಕೇಳಿ ಎಂದರೆ, ಏಕೆ ಜಿರೋ ಅವರ್ ಕೊಡುತ್ತೇವೆ? ಎಂದರೆ I can`t understand. ಆಯಿತು, ನೀವು ಕೇಳುವುದಕ್ಕೆ ರೆಡಿ ಇಲ್ಲವೆಂದರೆ ಮುಂದೆ ಹೋಗೋಣ ಬಿಡಿ

ಶ್ರೀ ಎಸ್. ರಾಜೇಂದ್ರನ್(ಕೆ.ಜಿ.ಎಫ್): ಮಾನ್ಯ ಅಧ್ಯಕ್ಷರೇ, ನಾನು ಏನು ತಪ್ಪು ಮಾಡಿಲ್ಲ. ನನ್ನ ಕ್ಷೇತ್ರದಲ್ಲಿ ಕುಡಿಯುವ ನೀರಿಗೆ ಸರ್ಕಾರಿ ಜಮೀನನ್ನು ಕಾಂಪೌಂಡ್ ಮಾಡಿಕೊಂಡಿದ್ದಾರೆ. ನಾನು ಸರ್ಕಾರಕ್ಕೆ, ಡಿ.ಸಿಯವರಿಗೆ ಮತ್ತು ಮುನಿಸಿಪಾಲಿಟಿಯ ಕಮೀಷನರ್‌ರವರಿಗೆ ಲೆಟರ್ ಅನ್ನು ಬರೆದಿದ್ದೇನೆ. There is no action. where Ihave to plead? Tell me.

ಇದರ ಬಗ್ಗೆ ಮಾನ್ಯ ಮಂತ್ರಿಯವರಿಗೆ ಹೇಳಿದರೆ, ನಾವು ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತಾರೆ. ನಾವು ಡೆಪ್ಯೂಟಿ ಕಮೀಷನರ್‌ರವರಿಗೆ ಲೆಟರ್ ಕೊಟ್ಟಿದ್ದೇವೆ. ಇದರ ಸರ್ವೆ ನಂಬರ್ ಅನ್ನು ಕೊಟ್ಟಿದ್ದೇವೆ. ತಾಲೂಕು ಮ್ಯಾಜಿಸ್ಟ್ರೇಟ್

ತಹಶೀಲ್ದಾರರು ಈ ಜಾಗ ಸರ್ಕಾರದ್ದು ಎಂದು ಹೇಳಿದ್ದಾರೆ. ಇವರು ಹೇಳಿದ ಮೇಲೆ ನಾನು ಮುನಿಸಿಪಾಲಿಟಿ ಕಮೀಷನರ್ ಹತ್ತಿರ ಬಂದು ಕೇಳಿದೆ. ಇದು ಕೋರ್ಟ್‌ನಲ್ಲಿ ಸ್ಟ್ಯಾಟಸ್ಕೋ ಇದೆಯೆಂದು ಹೇಳಿದರು. ಆದರೂ ಅದನ್ನು ವೆಕೇಟ್ ಮಾಡಿಲ್ಲ. ನಾನೇ ಖುದ್ದಾಗಿ ಹೋಗಿ ಆ ಪಿಟೀಷನ್ ಬಗ್ಗೆ ವೆಕೇಟ್ ಮಾಡಲು ತಂದಿದ್ದೇನೆ. ಪುನಃ ಮತ್ತೆ ಗೋಡೆಯನ್ನು ಕಟ್ಟುವುದಕ್ಕೆ ಅಲ್ಲಿ ಎನ್‌ಸಿಸಿಟಿಗೆ ಕಾಲ್ ಕೊಟ್ಟಿದ್ದಾರೆ. ಅವರು ಏನು ಇನ್‌ಸ್ಟೆಕ್ಷನ್ ಮಾಡಿದ್ದಾರೆ ನನಗೆ ಗೊತ್ತಿಲ್ಲ. ಆ ಕಾಂಪೌಂಡ್‌ಗೆ ಕಟ್ಟಿರುವಂತಹ ವಾಲಿಗೆ ಮುನಿಸಿಪಾಲಿಟಿಯ ಪರ್ಮಿಷನ್ ತೆಗೆದುಕೊಂಡಿದ್ದಾರೋ, ಎಂಬ ಬಗ್ಗೆ ಪತ್ರವನ್ನು ಬರೆದಿದ್ದೆ. ಅದಕ್ಕೆ ಮುನಿಸಿಪಾಲಿಟಿಯ ಕಮೀಷನರ್‌ರವರು ಪರ್ಮಿಷನ್ ಕೊಟ್ಟಿಲ್ಲವೆಂದು ತಿಳಿಸಿದ್ದಾರೆ. ಅಂದ ಮೇಲೆ ಏಕೆ ಕ್ರಮವನ್ನು ತೆಗೆದುಕೊಂಡಿಲ್ಲವೆಂದು ಕೇಳಿದರೆ, ಕ್ರಮ ತೆಗೆದುಕೊಳ್ಳುತ್ತೇವೆಂದು ಮುನಿಸಿಪಾಲಿಟಿಯ ಕಮೀಷನರ್ ಹೇಳುತ್ತಾರೆ. ಆದರೆ ಏನು ಕ್ರಮವನ್ನು ತೆಗೆದುಕೊಂಡಿಲ್ಲ. ಮತ್ತೆ ನಾನು ಡೆಪ್ಯೂಟಿ ಕಮೀಷನರ್ ಅವರಿಗೆ ಅಪ್ಲಿಕೇಷನ್ ಅನ್ನು ಕೊಟ್ಟ ಮೇಲೆ the respectful personality of the district.

ಅವರು ಏನು ಹೇಳಿದರೆಂದರೆ, ನಾವು ವಿಚಾರಣೆ ಮಾಡಿದ್ದೇವೆಂದು ಹೇಳಿದ್ದಾರೆ. ಕುಡಿಯುವ ನೀರಿನ ಬೋರ್‌ವೆಲ್ ಹಾಕಿ ನಾಲ್ಕು ತಿಂಗಳುಗಳಾಗಿವೆ. ಇಲ್ಲಿ ಏನು ವಿಚಾರಣೆಯಾಗಿದೆ, ದುಡ್ಡು ಯಾರದು? ಜಮೀನು ಯಾರದು? ಅವರು ಏನು ಹೇಳಿದ್ದಾರೆಂದರೆ, ಈ ವಿಚಾರ ಪತ್ರಿಕೆಯಲ್ಲಿ ಬಂದರೆ, ಶಾಸಕರು ಅಸೆಂಬ್ಲಿಯಲ್ಲಿ ರೈಸ್ ಮಾಡಿದ್ದಾರೆ, ಏನು ಕಿತ್ತು ಹಾಕಿದ್ದಾರೆಂದು ಹೇಳಿದ್ದಾರೆ. ಇಲ್ಲಿ ನನ್ನ ಗೌರವ ಏನು ಇದೆ.

ಅಧ್ಯಕ್ಷರು: ನಿಮ್ಮ ನೋವಿಗೆ ಸರ್ಕಾರದವರು ಪರಿಹಾರವನ್ನು ಹೇಳುತ್ತಾರೆ.

ಶ್ರೀ ಎಸ್. ರಾಜೇಂದ್ರನ್: ಮಾನ್ಯ ಅಧ್ಯಕ್ಷರೇ, ನಾನು ನೋಟೀಸ್ ಅನ್ನು ತಂದಿದ್ದೇನೆ. ಅದರ ಮೇಲೆ ಅವರು ರೆಸ್ಪಾನ್ಸಿಬಲ್ ಆಗಿ ಉತ್ತರವನ್ನು ಕೊಡಲಿ. ಆಮೇಲೆ ನಾನು ಕ್ಲಾರಿಫಿಕೇಶನ್ ಕೇಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಡಿರುವ ವಿಷಯಕ್ಕೆ ಸಂಬಂಧಪಟ್ಟಂತೆ ಕ್ಲಾರಿಫಿಕೇಶನ್ ಇಲ್ಲ. ಆದರೂ ಕೂಡ ಮಾನ್ಯ ಸದಸ್ಯರು ಏನು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ಜಿಲ್ಲಾಧಿಕಾರಿಯವರೊಡನೆ ನೇರವಾಗಿ ಸಂಪರ್ಕವನ್ನು ಮಾಡಿ ಇವತ್ತು ಸಾಯಂಕಾಲದೊಳಗೆ ಎಲ್ಲಾ ವಿವರವನ್ನು ಸದನದಲ್ಲಿ ಕೊಡುತ್ತೇನೆ. ಮತ್ತೆ ಕ್ರಮವನ್ನು ಕೂಡಾ ತೆಗೆದುಕೊಳ್ಳುತ್ತೇನೆ. ಯಾರಾದರೂ ಅಂತಹ ದುರ್ಬಾಷೆಯನ್ನು ಬಳಸಿದ್ದರೆ, ಅಂತಹ ಅಧಿಕಾರಿಗಳ ವಿರುದ್ಧ ಕೂಡ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್. ರಾಜೇಂದ್ರನ್: ಮಾನ್ಯ ಅಧ್ಯಕ್ಷರೇ, ಒಂದು ನಿಮಿಷ...

ಅಧ್ಯಕ್ಷರು: ತಾವು ದಯಮಾಡಿ ಕೂಡಿ, ಕ್ಲಾರಿಫಿಕೇಶನ್ ಇಲ್ಲ. ತಾವು ಹೊಸ ಹೊಸ ನಿಯಮಗಳನ್ನು ಹಾಕಬೇಡಿ. ತಾವು ಶೂನ್ಯವೇಳೆಯಲ್ಲಿ ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ. ಅದಕ್ಕೆ ಸರ್ಕಾರದಿಂದಲೂ ಉತ್ತರ ಬಂದಿದೆ. ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಸ್. ರಾಜೇಂದ್ರನ್: ಮಾನ್ಯ ಅಧ್ಯಕ್ಷರೇ, ಒಂದು ನಿಮಿಷ....

ಅಧ್ಯಕ್ಷರು: ಸಾಧ್ಯವಿಲ್ಲ. ಈಗ ಏನಾಗಿದೆಯೆಂದರೆ ಕೆಲವರು ತಲೆಯ ಮೇಲೆ ಕುಳಿತು ಕೊಳ್ಳುವಂತಹ ಸ್ಥಿತಿ ಮಾಡುತ್ತಿದ್ದೀರಿ.I won`t tolerate that. ತಾವು ದಯಮಾಡಿ ಕುಳಿತುಕೊಳ್ಳಿ, ಮಾನ್ಯ ಅರಗಜ್ಞಾನೇಂದ್ರರವರೇ, ತಾವು ಕೇಳಿ.

ಶ್ರೀ ಅರಗಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರ ತೀರ್ಥಹಳ್ಳಿ ತಾಲೂಕಿನಲ್ಲಿ, ನಡುವೆ ಹರಿಯುತ್ತಿರುವಂತಹ ಮಾಲತಿ ನದಿಗೆ ಒಂದು ಅಣೆಕಟ್ಟನ್ನು ಕಟ್ಟುತ್ತಾರೆಂಬ ಸುದ್ದಿ ಮಾಧ್ಯಮಗಳ ಮೂಲಕ ಬಂದು, ಸುಮಾರು 25–30 ಹಳ್ಳಿಗಳ ಜನರು ಭಯಭೀತರಾಗಿದ್ದಾರೆ. ಅವರು ಕೃಷಿ ಕೆಲಸವನ್ನು ನಿಲ್ಲಿಸಿದ್ದಾರೆ. ಅನೇಕ ರಾಜಕೀಯ ಪಕ್ಷಗಳು ಇದರ ಬಗ್ಗೆ ಭಾರೀ ಪ್ರತಿಭಟನೆಯನ್ನು ಆಂದೋಲನವನ್ನು ಮಾಡಬೇಕೆಂದು ಈಗಾಗಲೇ ಹಣ ಸಂಗ್ರಹ ಸ್ಥಿತಿಗೂ ಬಂದಿದೆ. ಇದು ಒಂದು ಸುದ್ದಿ ಅಷ್ಟೆ. ಆ ಸುದ್ದಿಯಿಂದಾಗಿ ನಮ್ಮ ಹಳ್ಳಿಯಲ್ಲಿ ಕ್ಷೋಭೆ ನಿರ್ಮಾಣವಾಗಿದೆ. ತಮಗೂ ಗೊತ್ತಿದೆ. ಆಗುಂಬೆ ಸೆಕೆಂಡ್ ಚಿರಾಪುಂಜಿಯೆಂದು ಹೆಸರು ಪಡೆದಿದೆ. ಆ ಆಗುಂಬೆಯಿಂದ 10 ಕಿ.ಮೀ ದೂರದ ಮೇಘವಳ್ಳಿಯ ಹತ್ತಿರ ಮಾಲತಿ ನದಿಗೆ ಅಣೆಕಟ್ಟು ಕಟ್ಟಿದರೆ, ಪಶ್ಚಿಮಘಟ್ಟದ ಆಗುಂಬೆ ಅತ್ಯಂತ ಸೂಕ್ಷ್ಮವಾಗಿರುವಂತಹ ಪ್ರದೇಶದಲ್ಲಿ ಇಡೀ ಏಷ್ಯಾ ಖಂಡದಲೆ ಆರ್ಟಿಸ್ಟ್ ಪಾರ್ಟ್ ಎಂದು ಹೇಳುವಂಥದ್ದನ್ನು ವಿಜ್ಞಾನಿಗಳು ಹೇಳುತ್ತಿದ್ದಾರೆ. ಸಾವಿರಾರು ಎಕರೆಯ ಅಂತಹ ನಿತ್ಯಹರಿದ್ವರ್ಣಕಾಡುಗಳನ್ನು ಕಡಿದು ಅಣೆಕಟ್ಟು ಕಟ್ಟಿದರೆ, ಬರ ಇನ್ನಷ್ಟು ಜಾಸ್ತಿಯಾಗುತ್ತದೆಂಬ ವಿಚಾರ ನಮ್ಮ ಅಧಿಕಾರಿಗಳ ಗಮನದಲ್ಲಿ ಇರಲಿ, ಎಂದು ನಾನು ಹೇಳುತ್ತೇನೆ. ಇದರ ಪಕ್ಕದಲ್ಲಿ ಶರಾವತಿ, ಚಕ್ರ, ವರಾಹಿ, ಭದ್ರಾ, ಈ ಯೋಜನೆಗಳ ಮೂಲಕ ಲಕ್ಷಗಟ್ಟಲೆ ಹೆಕ್ಟೇರ್ ಭೂಮಿ ಅರಣ್ಯ ನಾಶವಾಗಿದೆ. ಅದರ ಪರಿಣಾಮ ಸತತವಾಗಿ ನಾಲ್ಕು ವರ್ಷಗಳಿಂದ ಬರಗಾಲ ಬರುತ್ತಿದೆ. ಈಗ ಹೊಸ ಅಣೆಕಟ್ಟುಗಳು ಇರಲಿ, ಈಗ ಇರುವಂತಹ ಅಣೆಕಟ್ಟುಗಳನ್ನು ತುಂಬಿಸುವುದಕ್ಕೆ ಮಳೆಯಾಗುತ್ತಿಲ್ಲ. ಈ ವಿಚಾರ ಮಾನ್ಯ ಎಂ.ಪಿ. ಪ್ರಕಾಶ್‌ರವರಿಗೂ ಗೊತ್ತಿದೆ. ಈ ಸ್ಥಿತಿಯಲ್ಲಿ ಅಷ್ಟು ಹೇರಳವಾಗಿರುವಂತಹ ಕಾಡನ್ನು ಕಡಿದು, ಅಣೆಕಟ್ಟು ಕಟ್ಟುವಂತಹ